ನಾನು ನಿಮಗೆ ಸ್ವರ್ಗದ ಜನರ ಬಗ್ಗೆ ತಿಳಿಸಲೇ? ದುರ್ಬಲ ಎಂದು ಪರಿಗಣಿಸಲ್ಪಡುವ ಎಲ್ಲಾ ವಿನಮ್ರ ವ್ಯಕ್ತಿಗಳು. ಅವರು (ಏನಾದರೂ ಸಂಭವಿಸಬೇಕೆಂದು) ಅಲ್ಲಾಹನ ಮೇಲೆ ಆಣೆ ಮಾಡಿದರೆ, ಅಲ್ಲಾಹು ಅದನ್ನು ನೆರವೇರಿಸುತ್ತಾನೆ. ನಾನು ನಿಮಗೆ ನರಕದ ಜನರ ಬಗ್ಗೆ ತಿಳಿಸಲೇ? ಎಲ್ಲಾ ಕಠೋರ, ದುರಾಸೆ ಮತ್ತು ಅಹಂಕಾರಿಗಳಾದ ವ್ಯಕ್ತಿಗಳು

ಹಾರಿಸ ಬಿನ್ ವಹ್ಬ್ ಅಲ್-ಖುಝಾಈ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು: ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ: "ನಾನು ನಿಮಗೆ ಸ್ವರ್ಗದ ಜನರ ಬಗ್ಗೆ ತಿಳಿಸಲೇ? ದುರ್ಬಲ ಎಂದು ಪರಿಗಣಿಸಲ್ಪಡುವ ಎಲ್ಲಾ ವಿನಮ್ರ ವ್ಯಕ್ತಿಗಳು. ಅವರು (ಏನಾದರೂ ಸಂಭವಿಸಬೇಕೆಂದು)
ಅಲ್ಲಾಹನ ಮೇಲೆ ಆಣೆ ಮಾಡಿದರೆ, ಅಲ್ಲಾಹು ಅದನ್ನು ನೆರವೇರಿಸುತ್ತಾನೆ. ನಾನು ನಿಮಗೆ ನರಕದ ಜನರ ಬಗ್ಗೆ ತಿಳಿಸಲೇ? ಎಲ್ಲಾ ಕಠೋರ, ದುರಾಸೆ ಮತ್ತು ಅಹಂಕಾರಿಗಳಾದ ವ್ಯಕ್ತಿಗಳು."
[صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ಸ್ವರ್ಗವಾಸಿಗಳ ಮತ್ತು ನರಕವಾಸಿಗಳ ಕೆಲವು ಗುಲಕ್ಷಣಗಳನ್ನು ತಿಳಿಸಿದ್ದಾರೆ. ಸ್ವರ್ಗವಾಸಿಗಳಲ್ಲಿ ಹೆಚ್ಚಿನವರು ಯಾರೆಂದರೆ, "ದುರ್ಬಲ ಎಂದು ಪರಿಗಣಿಸಲ್ಪಡುವ ಎಲ್ಲಾ ವಿನಮ್ರ ವ್ಯಕ್ತಿಗಳು." ಅಂದರೆ, ವಿನಯಶೀಲ, ಸರ್ವಶಕ್ತನಾದ ಅಲ್ಲಾಹನಿಗೆ ವಿಧೇಯನಾದವನು, ಮತ್ತು ಅವನ ಮುಂದೆ ತನ್ನನ್ನು ತಗ್ಗಿಸಿಕೊಳ್ಳುವವನು. ಎಲ್ಲಿಯವರೆಗೆಂದರೆ, ಕೆಲವು ಜನರು ಅವನನ್ನು ದುರ್ಬಲ ಎಂದು ಪರಿಗಣಿಸಿ ತಿರಸ್ಕರಿಸುವಷ್ಟರ ಮಟ್ಟಿಗೆ. ಅಲ್ಲಾಹನ ಮುಂದೆ ತನ್ನನ್ನು ತಗ್ಗಿಸಿಕೊಳ್ಳುವ ಈ ವ್ಯಕ್ತಿ, ಅಲ್ಲಾಹನ ಔದಾರ್ಯವನ್ನು ಆಶಿಸಿ ಅಲ್ಲಾಹನ ಮೇಲೆ ಆಣೆ ಮಾಡಿದರೆ, ಅಲ್ಲಾಹು ಅದನ್ನು ನೆರವೇರಿಸುತ್ತಾನೆ, ಅವನು ಯಾವುದಕ್ಕಾಗಿ ಆಣೆ ಮಾಡಿದನೋ ಅದನ್ನು ಅವನಿಗೆ ನೀಡುತ್ತಾನೆ ಮತ್ತು ಅವನ ಬೇಡಿಕೆ ಹಾಗೂ ಪ್ರಾರ್ಥನೆಗೆ ಉತ್ತರಿಸುತ್ತಾನೆ. ನರಕವಾಸಿಗಳಲ್ಲಿ ಹೆಚ್ಚಿನವರು ಯಾರೆಂದರೆ, ಎಲ್ಲಾ "ಕಠೋರ ವ್ಯಕ್ತಿಗಳು" ಅಂದರೆ, ಒರಟು, ಕರ್ಕಶ, ಮತ್ತು ತೀವ್ರವಾಗಿ ವಾದಿಸುವವನು. ಅಥವಾ ಒಳಿತಿಗೆ ಮಣಿಯದೆ ಅಶ್ಲೀಲವಾಗಿ ವರ್ತಿಸುವವನು. "ದುರಾಸೆಯ ವ್ಯಕ್ತಿ" ಅಂದರೆ ಅಹಂಕಾರಿ, ದುರಾಸೆಯ ವ್ಯಕ್ತಿ, ದೊಡ್ಡ ಗಾತ್ರದ ದೇಹವನ್ನು ಹೊಂದಿರುವವನು, ಅಹಂಭಾವದಿಂದ ನಡೆಯುವವನು ಮತ್ತು ಕೆಟ್ಟ ನಡವಳಿಕೆಯವನು. "ಅಹಂಕಾರಿ ವ್ಯಕ್ತಿ" ಅಂದರೆ, ಸತ್ಯವನ್ನು ತಿರಸ್ಕರಿಸುವವನು ಮತ್ತು ಇತರರನ್ನು ಕೀಳಾಗಿ ಕಾಣುವವನು.

http://sunnah.global/hadeeth/kn/show/3573